## ಮನ ಮಿಡಿದ ಸಂಚಿಕೆ

ಝೀ ಕನ್ನಡದಲ್ಲಿ ಇತ್ತೀಚೆಗೆ ಪ್ರಸಾರವಾದ 'ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್' ಸಂಚಿಕೆಯು ಮನ ಕಲಕುವಂತಿತ್ತು. ಬಹುಅಂಗಾಂಗ ವೈಕಲ್ಯದಿಂದ ಹುಟ್ಟಿದ್ದ ಸಹನಾ ಎಂಬ ಹೆಣ್ಣುಮಗುವನ್ನು ಇಷ್ಟೆತ್ತರಕ್ಕೆ ಬೆಳೆಸಿ, ಒಂದು ಮುಖ್ಯವಾಹಿನಿಯಲ್ಲಿ ಅವಳ ನೃತ್ಯ ಪ್ರದರ್ಶನವನ್ನು ತೋರಿಸಿದ ಅವಳ ತಾಯಿ–ತಂದೆಯರ ಸಾಧನೆ ಅದ್ವಿತೀಯ.

ಹುಟ್ಟುತ್ತಲೇ ಕಾಲುಗಳೆರಡೂ ಮಡಚಿಕೊಂಡಿದ್ದು, ಬೆಳೆಯುತ್ತಿದ್ದಂತೆ ಕಿವಿ ಕೇಳದ, ಸ್ವರವೂ ಇರದ ಸ್ಥಿತಿಯಲ್ಲಿ ಮಗುವನ್ನು ನೋಡುವಾಗ ಅವರ ಪೋಷಕರ ಅವಸ್ಥೆ ಏನಾಗಬೇಡ? ಅಕ್ಕಪಕ್ಕದವರ ನಿಂದನೆ ಬೇರೆ ಅವರನ್ನು ಚುಚ್ಚುತ್ತಿತ್ತು. ಅವಳಿಗೋಸ್ಕರ ದಿನವೂ ಹಣವನ್ನು ವ್ಯಯಿಸುತ್ತಾ ಅವಳ ಪ್ರಗತಿಯ ಬಗ್ಗೆ ಯೋಚಿಸುತ್ತಿರುವ ಅವರ ಪ್ರಯತ್ನ ನಿಜಕ್ಕೂ ಶ್ಲಾಘನೀಯ. ಕಿವಿಗೆ ದುಬಾರಿ ವೆಚ್ಚದ ಉಪಕರಣಗಳನ್ನು ಅಳವಡಿಸಲು ಅವರು ಪಡುತ್ತಿರುವ ಯತ್ನಕ್ಕೆ ನಟ ಶಿವರಾಜಕುಮಾರ್ ಕೈ ಜೋಡಿಸಿದ್ದು ಸಂತೋಷದ ವಿಚಾರ.

—ಶ್ರುತಿ ಎಸ್.

## ಅಪ್‌ಡೇಟ್ ಆಗಬೇಕು

ಝೀ ಕನ್ನಡದ 'ಹಿಟ್ಲರ್ ಕಲ್ಯಾಣ' ಪ್ರೇಕ್ಷಕರ ತಾಳ್ಮೆಯನ್ನು ಪರೀಕ್ಷೆ ಮಾಡುವಂತಿದೆ. ನಾಯಕಿ ಮಾಡುವ ಒಂದೊಂದು ಕೆಲಸವೂ ನಾಯಕನ ತಾಳ್ಮೆ ಕೆಡಿಸುವುದಲ್ಲದೆ, ನೋಡುಗರಿಗೆ ಕಿರಿಕಿರಿ ಉಂಟು ಮಾಡುತ್ತದೆ. ಕೆಲವು ಪ್ರಕರಣಗಳಂತೂ ನಿರ್ದೇಶಕರಿಗೆ ವಾಸ್ತವದ ಜ್ಞಾನ ಇದೆಯೋ ಇಲ್ಲವೋ ಎಂದು ಸಂಶಯ ಬರಿಸುವಂತಿದೆ. ಕೈಯಲ್ಲಿ ಯಾವಾಗಲೂ ಮೊಬೈಲ್ ಹಿಡಿದು ಓಡಾಡುವ ನಾಯಕಿ, ಖಳನಾಯಕಿಯ ದುಷ್ಕೃತ್ಯವನ್ನು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿ ನಾಯಕನಿಗೆ ತೋರಿಸಬಹುದೆಂಬ ತಿಳಿವಳಿಕೆ ಇಲ್ಲದೆ ಇರುವುದು ನೋಡುಗರಲ್ಲಿ ನಿರ್ದೇಶಕರ ಬಗ್ಗೆ ಸಂಶಯ ಉಂಟುಮಾಡುತ್ತದೆ.

—ಮಾಧವ ಉದ್ಯಾವರ, ಮೈಸೂರು

## ವಿಷ್ಣು ಚಿತ್ರಗಳೂ ಬರಲಿ

ಇತ್ತೀಚೆಗೆ ಕನ್ನಡ ಟೀವಿ ವಾಹಿನಿಗಳಲ್ಲಿ ಪರಭಾಷಾ ಸಿನಿಮಾಗಳನ್ನು ಕನ್ನಡಕ್ಕೆ ಡಬ್ ಮಾಡಿ ಪ್ರಸಾರ ಮಾಡುತ್ತಿದ್ದಾರೆ. ಡಬ್ಬಿಂಗ್ ಚಿತ್ರಗಳನ್ನು ನೋಡುವಾಗ ಆಯಾ ಭಾಷೆಗಳ ತಾಂತ್ರಿಕತೆ, ನಟ–ನಟಿಯರ ಅಭಿನಯ, ನಿರ್ದೇಶನ, ದೃಶ್ಯ ವೈಭವ, ಪ್ರಕೃತಿ ಸೌಂದರ್ಯ ವಿವರಗಳೂ ಪರಿಚಯವಾಗುತ್ತವೆ.

ಕನ್ನಡ ನಟರೂ ಅನ್ಯಭಾಷೆಯ ಅನೇಕ ಸಿನಿಮಾಗಳಲ್ಲಿ ನಟಿಸಿದ್ದಾರೆ. ವಿಷ್ಣುವರ್ಧನ್ ತಮಿಳಿನ 'ಈವಿ', 'ವಿಡುದಲೈ'ನಲ್ಲಿ ನಟಿಸಿದ್ದಾರೆ. ಆ ಸಿನಿಮಾ ಮೂಲದಲ್ಲಿ ಅನೇಕರು ನೋಡಿರಬಹುದು. ಅಂತಹ ಸಿನಿಮಾಗಳನ್ನು ಕನ್ನಡಕ್ಕೆ ಡಬ್ ಮಾಡಿ ಪ್ರಸಾರ ಮಾಡಬೇಕು. ಕನ್ನಡ ನಟ ವಿಷ್ಣುವರ್ಧನ್ ಅವರನ್ನು ತಮಿಳು ಚಿತ್ರರಂಗ ಮತ್ತು ಪ್ರೇಕ್ಷಕರು ಹೇಗೆ ಸ್ವೀಕರಿಸಿದರು ಎನ್ನುವುದನ್ನು ತಿಳಿಯುವುದೇ ಒಂದು ರೋಮಾಂಚಕ ಅನುಭವ ಅನಿಸುತ್ತದೆ.

—ಎಸ್.ವಿ. ಶ್ರೀನಿವಾಸ್, ಮೈಸೂರು

ವಾರದ ಪತ್ರ

## ಸೌಹಾರ್ದದ ಬದುಕೂ ಇರಲಿ

ಕನ್ನಡ ಧಾರಾವಾಹಿಗಳಲ್ಲಿ ಹಬ್ಬ ಹರಿದಿನಗಳ ಸಂದರ್ಭದಲ್ಲಿ, ಕಥೆಗೆ ಪೂರಕವಾಗುವಂತೆ ಆಯಾ ಹಬ್ಬಗಳ ಸನ್ನಿವೇಶ ಸೃಷ್ಟಿಸಿ ಅಲ್ಲೊಂದಿಷ್ಟು ಸಂಭ್ರಮವನ್ನು ಕಟ್ಟಿಕೊಡುವುದಿದೆ. ಆದರೆ, ಈ ಧಾರಾವಾಹಿಗಳ ಕರ್ತೃಗಳಿಗೆ ಕೇವಲ ವರಮಹಾಲಕ್ಷ್ಮೀ, ಗಣೇಶ, ಹಬ್ಬ, ದಸರಾ, ದೀಪಾವಳಿಗಳಷ್ಟೇ ಕಾಣಿಸುವುದೇ? ಇತರ ಧರ್ಮಗಳ ಹಬ್ಬಗಳನ್ನೂ ತೋರಿಸಿದರೆ ಆಯಾ ಧರ್ಮಗಳ ಹಬ್ಬಗಳ ಸ್ವರೂಪ ಮಹತ್ವವನ್ನು ಬೇರೆಯವರಿಗೂ ತಿಳಿಸಿದಂತಾಗುವುದಲ್ಲವೇ?

ರಂಜಾನ್, ಬಕ್ರೀದ್, ಕ್ರಿಸ್‌ಮಸ್‌ನಂತಹ ಹಬ್ಬಗಳ ಆಚರಣೆಯನ್ನೂ ತೋರಿಸಿದರೆ ಉತ್ತಮ. ಇದರಿಂದ ಸೌಹಾರ್ದಯುತ ಸಂದೇಶವನ್ನೂ ಪಸರಿಸಿದಂತಾಗುತ್ತದೆ. ನಾಡು ಧಾರ್ಮಿಕ ಕಾರಣಗಳಿಂದಾಗಿ ಹೊತ್ತಿ ಉರಿಯುತ್ತಿರುವ ಸಂದರ್ಭದಲ್ಲಿ ಸೌಹಾರ್ದದ ತಂಗಾಳಿ ಬೀಸಲು ಧಾರಾವಾಹಿಗಳ ನಿರ್ಮಾತೃಗಳು ಮನಸ್ಸು ಮಾಡಬೇಕು. ಕಥೆಗಳಲ್ಲಿಯೂ ಚರ್ವಿತ ಚರ್ವಣ ವಿಷಯಗಳಿಗಿಂತ ಸೌಹಾರ್ದವನ್ನು ಬಿಂಬಿಸುವ ಕಥೆ, ಪಾತ್ರಗಳಿಗೆ ಹೆಚ್ಚು ಆದ್ಯತೆ ಸಿಗಲಿ. ಎಲ್ಲ ಧರ್ಮಗಳನ್ನು ಪ್ರತಿನಿಧಿಸುವ ಪಾತ್ರಗಳೂ ಕಾಣಿಸಲಿ.

—ಗೋವಿಂದಯ್ಯ, ಬೆಂಗಳೂರು

## ಬೆರಗಿನ 'ಪುರಂದರ...'

ಕಲರ್ಸ್ ಕನ್ನಡದ 'ದಾಸ ಪುರಂದರ' ದಿನದಿಂದ ದಿನಕ್ಕೆ ಜನಪ್ರಿಯವಾಗುತ್ತಿದೆ. ನಿರ್ದೇಶಕರು ಪುರಂದರರ (ಶ್ರೀನಿವಾಸರ) ಬಾಲ್ಯ, ಗುರುಗಳ ಅನ್ವೇಷಣೆಯ ದಾರಿಯಲ್ಲಿ ಎದುರಿಸುವ ಕಠಿಣ ಸನ್ನಿವೇಶ, ನಾರದ ಸ್ವರೂಪಿಯ ದೃಢಸಂಕಲ್ಪ, ಮನೋಸ್ಥೈರ್ಯ, ಅಭಿನಯ ಮನೋಜ್ಞವಾಗಿದೆ. ನಮಗೆಲ್ಲ ತಿಳಿಯದ ಎಷ್ಟೋ ಘಟನೆಗಳು ಧಾರಾವಾಹಿಯಲ್ಲಿ ಮೂಲಕ ಗೊತ್ತಾಗುತ್ತಿದೆ. ಹೊರಾಂಗಣ ಚಿತ್ರೀಕರಣದ ಆಯ್ಕೆ, ಸನ್ನಿವೇಶಗಳು ಭಕ್ತಿಯುಗದ ಕಾಲಘಟ್ಟಕ್ಕೆ ಪೂರಕವಾಗಿದೆ. ಈ ಧಾರಾವಾಹಿ ವೀಕ್ಷಕರು ಕುತೂಹಲ ಮತ್ತು ಬೆರಗಿನಿಂದ ಕಾಯುವಂತೆ ಮಾಡಿದೆ.

—ಎಂ.ಆರ್. ಚಂದ್ರಶೇಖರ್, ಬೆಂಗಳೂರು

## ಕಣ್ಣಿಗೆ ಹಬ್ಬ, ನೃತ್ಯದ ಸಾರ್ಥಕತೆ

ಮನರಂಜನಾ ವಾಹಿನಿಗಳಲ್ಲಿನ ಡಾನ್ಸ್‌ಗೆ ಸಂಬಂಧಿಸಿದ ರಿಯಾಲಿಟಿ ಶೋಗಳು ಏಕತಾನತೆಯಿಂದ ಕೂಡಿರುತ್ತವೆ. ಆ ಶೋಗಳಲ್ಲಿ ಭಾಗವಹಿಸುವ ಬಹುತೇಕ ನೃತ್ಯಪಟುಗಳು ಆಧುನಿಕ ನೃತ್ಯವನ್ನು ಪ್ರದರ್ಶಿಸುತ್ತಾರೆ. ಬಹುತೇಕ ಸಂದರ್ಭಗಳಲ್ಲಿ ಆ ನೃತ್ಯಪ್ರದರ್ಶನಗಳಿಗೂ ಕಸರತ್ತಿಗೂ ಹೆಚ್ಚಿನ ವ್ಯತ್ಯಾಸವೇ ಇರುವುದಿಲ್ಲ. ನೃತ್ಯದ ಬಾಗುಬಳುಕು ಹಾಗೂ ಲಯ–ಲಾಸ್ಯಕ್ಕೆ ಹೆಚ್ಚಿನ ಒತ್ತು ನೀಡದೆ, ದೈಹಿಕ ಕಸರತ್ತೇ ನೃತ್ಯವಾಗಿಬಿಡುತ್ತದೆ. ಇದಕ್ಕೆ ಅಪವಾದ, 'ಕಲರ್ಸ್ ಕನ್ನಡ'ದ 'ಡಾನ್ಸಿಂಗ್ ಚಾಂಪಿಯನ್' ಶೋನಲ್ಲಿನ ಚಂದನಾ ಅನಂತಕೃಷ್ಣ ಹಾಗೂ ಅಕ್ಷತಾ ಅವರ ಜೋಡಿಯ ನೃತ್ಯಪ್ರದರ್ಶನ.

'ಬಿಗ್ ಬಾಸ್' ಮೂಲಕ ಚಂದನಾ ಈಗಾಗಲೇ ವೀಕ್ಷಕರಿಗೆ ಪರಿಚಿತರು. ಬಿಗ್ ಬಾಸ್‌ನಲ್ಲಿ ಅವರ ಹಾಡುಗಾರಿಕೆಗೆ ಅವಕಾಶ ದೊರೆತಿತ್ತು. ಈಗ 'ಡಾನ್ಸಿಂಗ್ ಚಾಂಪಿಯನ್' ಅವರೊಳಗಿನ ನೃತ್ಯ ಕಲಾವಿದೆಯನ್ನು ಬೆಳಕಿಗೆ ತಂದಿದೆ. ತಮ್ಮ ಜೊತೆಗಾರ್ತಿ ಅಕ್ಷತಾ ಅವರೊಂದಿಗೆ ಚಂದನಾ ಪ್ರಸ್ತುತಪಡಿಸಿರುವ ನೃತ್ಯಪ್ರದರ್ಶನಗಳು ಸಹೃದಯರ ಮನಸೂರೆಗೊಳ್ಳುವಂತಿವೆ. ಭಾರತದ ವಿವಿಧ ಪ್ರದೇಶಗಳಲ್ಲಿನ ನೃತ್ಯಪ್ರಕಾರಗಳನ್ನು ಕನ್ನಡದ ವೇದಿಕೆಗೆ ಒಗ್ಗಿಸುತ್ತಿರುವ ಈ ಕಲಾವಿದೆಯರ ಪ್ರದರ್ಶನ ಸ್ವಾಗತಾರ್ಹ. 'ಡಾನ್ಸಿಂಗ್ ಚಾಂಪಿಯನ್'ನ ಉಳಿದ ಸ್ಪರ್ಧಿಗಳು ಕಸರತ್ತನ್ನೇ ನೃತ್ಯದ ಭಾಗವಾಗಿಸಿಕೊಂಡಿರುವಾಗ, ಈ ತರುಣಿಯರು ಶಾಸ್ತ್ರೀಯ ನೃತ್ಯಪ್ರಕಾರಗಳನ್ನು ತಮ್ಮ ಅಭಿವ್ಯಕ್ತಿಯ ಭಾಗವಾಗಿಸಿಕೊಂಡಿರುವುದು ವಿಶೇಷ. ಅವರಿಗೆ ಅಭಿನಂದನೆಗಳು.

—ಗೌರಮ್ಮ, ಚಿಕ್ಕಬಳ್ಳಾಪುರ

## ಪಕ್ಷಪಾತ ಧೋರಣೆ ಸಲ್ಲದು

'ಐಪಿಎಲ್' ಕ್ರಿಕೆಟ್ ಪಂದ್ಯಗಳನ್ನು ಕನ್ನಡದಲ್ಲಿ ನೋಡುವ ಅವಕಾಶ ದೊರೆತಿರುವುದರಿಂದ ಆಟದ ರುಚಿ ಹೆಚ್ಚಾಗಿದೆ. ಆಟದ ಸೊಗಸನ್ನು ಕನ್ನಡದಲ್ಲಿ ಕಾಮೆಂಟರಿ ನೀಡುವವರು ಹಾಳು ಮಾಡುತ್ತಿದ್ದಾರೆ. ಅವರ ಪಕ್ಷಪಾತ ಧೋರಣೆ ವಿಚಿತ್ರವಾಗಿದೆ. 'ಆರ್‌ಸಿಬಿ' ತಂಡ ಆಡುವಾಗ ಗೆಲ್ಲಬೇಕೆಂದು ಬಯಸುವುದು, ಆ ತಂಡದ ಆಟಗಾರರನ್ನು ವಿನಾಕಾರಣ ಹೊಗಳುವುದು ಕಿರಿಕಿರಿ ಎನ್ನಿಸುತ್ತದೆ. ವೀಕ್ಷಕ ವಿವರಣೆಗಾರರು ಪಕ್ಷಪಾತ ಧೋರಣೆಯಿಂದ ಮುಕ್ತವಾಗಿರಬೇಕು. ಯಾವುದೇ ತಂಡದ ಪರವಾಗಿ, ನಿರ್ದಿಷ್ಟ ಆಟಗಾರರ ಪರವಾಗಿ ಅವರು ಮಾತನಾಡುವುದು ಕ್ರೀಡಾಸ್ಫೂರ್ತಿಗೆ ತಕ್ಕುದಲ್ಲ. ವೀಕ್ಷಕರ ವಿವರಣೆಗಾರರು ಮಾಡಬೇಕಾದ್ದು ಆಟದ ವಿಶ್ಲೇಷಣೆಯನ್ನೇ ಹೊರತು, ತಮ್ಮ ಒಲವು ನಿಲುವುಗಳ ಪ್ರತಿಪಾದನೆಯನ್ನಲ್ಲ.

—ಎಲ್.ಆರ್. ಚಂದ್ರಶೇಖರ್, ಬೆಂಗಳೂರು